ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಸಿ ಸಿ ವಕೀಲರಿಂದಃ

ನನ್ನ ಹೆಸರು ಸಿದ್ದಲಿಂಗಯ್ಯ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿಗಳು ತಮ್ಮ ಸಾಕ್ಷಿಯನ್ನು ಕರೆಸಲು ನೀಡಿದಂತಹ ಅರ್ಜಿಯಲ್ಲಿ ಸಾಕ್ಷಿಯ ಹೆಸರು ಸಿದ್ದಲಿಂಗಯ್ಯ ಬಿನ್ ಚಿಕ್ಕಣ್ಣ ಎಂದು ತೋರಿಸಿದ್ದು, ಈಗ ಶಿವಲಿಂಗಯ್ಯ ಬಿನ್ ಚಿಕ್ಕಣ್ಣ ಅಂದರೆ ನನ್ನನ್ನು ಕರೆಸಿ ಅವರಿಗೆ ಅನುಕೂಲವಾಗುವಂತೆ ಸಾಕ್ಷಿಯನ್ನು ನುಡಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ನೀಡಿದಂತಹ ಅರ್ಜಿಯಲ್ಲಿ ಶಿವಲಿಂಗಯ್ಯ ಎಂದು ತೋರಿಸುವ ಬದಲಾಗಿ ಸಿದ್ದಲಿಂಗಯ್ಯ ಎಂದು ತಪ್ಪಾಗಿ ತೋರಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಿಳಾಸವನ್ನು ಅಂಜನಾಪುರ ಅಂಚೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ವಾದಿಗಳ ವಕೀಲರು ಸಾಕ್ಷಿದಾರರನ್ನು ಕರೆಸಲು ನೀಡಿದ ಅರ್ಜಿಯಲ್ಲಿ ಸಾಕ್ಷಿದಾರರಾದ ಸಿದ್ದಲಿಂಗಯ್ಯ ಎಂಬ ಸಾಕ್ಷಿದಾರರ ವಿಳಾಸದಲ್ಲಿ ಬನ್ನಿಕುಪ್ಪೆ ಅಂಚೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅವರು ತಪ್ಪಾಗಿ ತೋರಿಸಿರುತ್ತಾರೆಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಸುವ ಸಮಯದಲ್ಲಿ ನನ್ನ ವಿಳಾಸವು ಕೈಲಾಂಚ ಹೋಬಳಿ ಎಂದು ಹೇಳಿ ಬರೆಸಿರುತ್ತೇನೆ. ಸಾಕ್ಷಿಗೆ ವಾದಿಗಳು ಸಾಕ್ಷಿದಾರರನ್ನು ಕರೆಸಲು ಮಾನ್ಯ ನ್ಯಾಯಾಲಯಕ್ಕೆ ನೀಡಿ ಅರ್ಜಿಯಲ್ಲಿ 2ನೇ ಸಾಕ್ಷಿದಾರರ ವಿಳಾಸದಲ್ಲಿ ಕೈಲಾಂಚ ಹೋಬಳಿ ಎಂದು ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಹಾಕಿರುವ ಅರ್ಜಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ.

ಸಾಮಾನ್ಯವಾಗಿ ಒಂದು ಊರಿನಲ್ಲಿ ಚಿಕ್ಕಣ್ಣ ಎಂಬ ಹೆಸರಿನಲ್ಲಿ ಸುಮಾರು ಜನರು ಇರುತ್ತಾರೆ ಎಂದರೆ ಸರಿ. ಸಾಕ್ಷಿದಾರರನ್ನು ಕರೆಸಲು ವಾದಿಗಳು ನೀಡಿದ ಅರ್ಜಿಯಾಲ್ಲಿ 2ನೇ ಸಾಕ್ಷಿದಾರರ ಹೆಸರು ಸಿದ್ದಲಿಂಗಯ್ಯ ಎಂದು ತೋರಿಸಿದ್ದು ಸದರಿ ಸಿದ್ದಲಿಂಗಯ್ಯನವರೇ ಬೇರೆ ಈ ದಿನ ಸಾಕ್ಷಿ ನೀಡಲು ಬಂದಿರುವ ನಾನು ಶಿವಲಿಂಗಯ್ಯ ಬೇರೆ ಬೇರೆ ಎಂದರೆ ಸಾಕ್ಷಿಯು ವಕೀಲರು ತಮ್ಮ ಅರ್ಜಿಯಲ್ಲಿ ಹೆಸರನ್ನು ತಪ್ಪಾಗಿ ಬರೆದಿರುತ್ತಾರೆಂದು ನುಡಿಯುತ್ತಾರೆ.

ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ಹೇಳುವಂತೆ ಈ ದಿನ ಸೀನಪ್ಪನವರು ಕರೆದುಕೊಂಡು ಬಂದಿರುತ್ತಾರೆ. ಸೀನಪ್ಪನವರು ಜಮೀನನ್ನು ಯಾರು ಮಾಡುತ್ತಿದ್ದಾರೆ ಯಾರು ಮಾಡುತ್ತಿರುವುದಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಲು ನನ್ನನ್ನು ಕರೆಸಿರುತ್ತಾರೆ. ಸೀನಪ್ಪನವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುವ ಮೊದಲು ಅವರ ವಕೀಲರ ಬಳಿ ಕರೆದುಕೊಂಡು ಹೋಗಿ ನನ್ನ ಹೆಸರನ್ನು ಬರೆಸಿ ನಂತರ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆಂದು ನುಡಿದು ಸಾಕ್ಷಿಯು ಮುಂದುವರೆದು ಈ ದಿನ ನನ್ನನ್ನು ಸೀನಪ್ಪನವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ, ಈ ಹಿಂದೆ ವಕೀಲರ ಬಳಿ ಕರೆದುಕೊಂಡು ಹೋಗಿ ಹೆಸರನ್ನು ಬರೆಸಿ ದಿನಾಂಕವನ್ನು ತಿಳಿಸಿದಂತೆ ಈ ದಿನ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ನಾನೇ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸೀನಪ್ಪನವರು ಒಂದು ಬಾರಿ

ವಕೀಲರ ಬಳಿ ಹೆಸರನ್ನು ಬರೆಸಲು ಕರೆದುಕೊಂಡು ಹೋದ ನಂತರ ಪುನಃ ನಾನು ವಕೀಲರ ಬಳಿ ಹೋಗಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಸಹಿ ಹಾಕಿರುವ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ. ನಾನು ಸಹಿಯನ್ನು ನ್ಯಾಯಾಲಯದ ಹತ್ತಿರ ಮಾಡಿರುತ್ತೇನೆ ಸಾಕ್ಷಿ ಪ್ರಮಾಣ ಪತ್ರ ಎಲ್ಲಿ ಬೆರಳಚ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಅದನ್ನು ಸೀನಪ್ಪನವರೇ ಮಾಡಿಸಿರುತ್ತಾರೆಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಾಮಾಣ ಪತ್ರದ ಖಂಡಿಕೆ 2 ರಲ್ಲಿ ವಾದಿಗಳು ಸರ್ವೆ ನಂಃ108/1 ರಲ್ಲಿ 1 ಎಕರೆ 0.38 ಗುಂಟೆ ಜಮೀನನ್ನು ಖರೀದಿ ಮಾಡಿದ್ದು ಎಂದು ಬರೆಸಿದ್ದು ಅದನ್ನು ವಾದಿಗಳು ಎಂದು, ಯಾರಿಂದ ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಖರೀದಿ ಮಾಡಿದ ಬಗ್ಗೆ ನನಗೆ ಸೀನಪ್ಪನವರೇ ತಿಳಿಸಿರುತ್ತಾರೆ. ಸದರಿ ಆಸ್ತಿಯನ್ನು ಯಾರು ಖರೀದಿಸಿದ್ದಾರೆ ಎಂಬ ಬಗ್ಗೆ ನನಗೆ ಖುದ್ದಾಗಿ ತಿಳಿದಿಲ್ಲ. ಸದರಿ ಜಮೀನಿನಲ್ಲಿ ಮಾವಿನ ಮರಗಳು ಮತ್ತು ಗಿಡಗಳು ಇದ್ದು, ಎಷ್ಟು ಮಾವಿನ ಮರಗಳು ಇವೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ಜಮೀನಿನಲ್ಲಿ ಎಷ್ಟು ಮಾವಿನ ಮರಗಳು ಇರುತ್ತವೆ ಎಂದು ಹೇಳಿ ಬರೆಸಿಲ್ಲ. ಸದರಿ ಜಮೀನಿನಲ್ಲಿ ರಾಗಿ ಬೆಳೆದಿದ್ದರು ಈಗ ಹುರುಳಿಯನ್ನು ಬೆಳೆದಿರುತ್ತಾರೆ.

2017 ರಲ್ಲಿ ಜಗಳವು ಸೀನಪ್ಪ ಮತ್ತು ಚಂದ್ರಪ್ಪನವರ ನಡುವೆ ಮಾತಿನ ಚಕಮಕಿ ನಡೆದಿತ್ತು ಆದರೆ ಯಾವುದೇ ಗಲಾಟೆ ನಡೆದಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಗಲಾಟೆಯಾದ ಬಗ್ಗೆ ನಾನು ಹೇಳಿರುವುದಿಲ್ಲ. ಸಾಕ್ಷಿಗೆ ಒಂದು ವೇಳೆ ಗಲಾಟೆಯಾದ ಬಗ್ಗೆ

ನಾನು ಹೇಳದೇ ಇದ್ದರೂ ಸಹ ಬರೆಯಲಾಗಿರುತ್ತದೆಯೇ ಎಂದರೆ ಸಾಕ್ಷಿಯು ಮಾತಿನ ಗಲಾಟೆ ಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ವಿಚಾರವಾಗಿ ಯಾರೂ ದೂರನ್ನು ದಾಖಲಿಸಿರುವುದಿಲ್ಲ. ಸಾಮಾನ್ಯವಾಗಿ ಜಮೀನಿನ ವಿಷಯವಾಗಿ ಬಾಯಿಮಾತಿನ ಗಲಾಟೆಯಾದರೆ ಒಬ್ಬರಿಗೊಬ್ಬರು ಬೈದುಕೊಂಡರೆ ದೂರನ್ನು ಕೊಡುವುದು ಸಾಮಾನ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ 2017 ರಲ್ಲಿ ಪ್ರತಿವಾದಿಗಳು ವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ಜಮೀನಿನ ಬಳಿ ಬಂದು ಗಲಾಟೆ ಮಾಡುತ್ತಿರುವಾಗ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಆ ರೀತಿ ಬರೆಸಿರುವುದಿಲ್ಲ ಸೀನಪ್ಪನವರೇ ಜಮೀನು ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಜಮೀನಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ರೆವೆನ್ಯೂ ನ್ಯಾಯಾಲಯದಲ್ಲಿ ಮತ್ತು ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ನನಗೆ ಯಾವುದೂ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.